

بِسۡمِ اللّٰہِ الرَّحۡمٰنِ الرَّحِیۡم

# ಸ್ವೀಡನ್, ಡೆನ್ಮಾರ್ಕ್ ಸಂದರ್ಶನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **27–05–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಮೇ 27, ಪ್ರತಿಯೊಬ್ಬ ಅಹ್ಮದಿ ತಿಳಿದಿರುವ ಹಾಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಈ ದಿನಾಂಕದಂದು ಖಿಲಾಫತ್ ಪ್ರಾರಂಭವಾಯಿತು. ಈ ಕಾರಣದಿಂದ ಈ ದಿನಾಂಕದಂದು ಅಹ್ಮದಿಯಾ ಜಮಾಅತ್ ಯೌಮೆ ಖಿಲಾಫತ್ ದಿನಾಚರಣೆ ಮಾಡುತ್ತಿದೆ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಅಲ್ಲಾಹನು ನಮ್ಮನ್ನು ಚದುರಿ ಹೋಗುವುದರಿಂದ ರಕ್ಷಿಸಿದನು. ನಮ್ಮನ್ನು ಒಂದು ದಾರದಲ್ಲಿ ಪೋಣಿಸಿದನು. ಇದರ ಬಗ್ಗೆ ನಾವು ಹೀಗೆ ಪ್ರತಿಜ್ಞೆ ಸಹ ಮಾಡುತ್ತೇವೆ. ಅಹ್ಮದಿಯಾ ಖಿಲಾಫತ್ ಸುಸ್ಥಿರವಾಗಿರಲು ಮತ್ತು ಯಾವಾಗಲೂ ಜಾರಿಯಲ್ಲಿರಲು ಪ್ರತಿಯೊಂದು ರೀತಿಯ ಬಲಿದಾನ ನೀಡಲು ನಾವು ಸಿದ್ಧರಾಗಿರುತ್ತೇವೆ ಎಂದು (ಇನ್‌ಶಾಅಲ್ಲಾಹ್). ಅಹ್ಮದಿಯಾ ಜಮಾಅತಿನ ಕಳೆದ 108 ವರ್ಷಗಳ ಚರಿತ್ರೆ ಸಾಕ್ಷ್ಯ ಹೇಳುವುದೇನೆಂದರೆ ಈ ಪ್ರತಿಜ್ಞೆಯನ್ನು ಈಡೇರಿಸಲು ಒಂದು ಪೀಳಿಗೆಯ ನಂತರ ಇನ್ನೊಂದು ಪೀಳಿಗೆ ಸ್ಥಿರತೆಯ ಹೆಜ್ಜೆಯನ್ನು ಹೊಂದಿ ಬಲಿದಾನ ನೀಡಿದುವು. ಈಗ ಜಮಾಅತಿನಲ್ಲಿರುವ ಪ್ರತಿಯೊಂದು ವ್ಯಕ್ತಿ ಮತ್ತು ಮುಂದೆ ಈ ಜಮಾಅತಿಗೆ (ಇನ್‌ಶಾಅಲ್ಲಾಹ್) ಸೇರುವ ಪ್ರತಿಯೊಬ್ಬ ವ್ಯಕ್ತಿಗೆ ಸಹ ಈ ಪ್ರತಿಜ್ಞೆಯನ್ನು ಈಡೇರಿಸುವ ಭಾಗ್ಯವನ್ನು ಅಲ್ಲಾಹನು ನೀಡುತ್ತಾ ಇರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಆಗಮನದ ಉದ್ದೇಶ ಮನುಷ್ಯನನ್ನು ಅಲ್ಲಾಹನಿಗೆ ಸಮೀಪವಾಗುವಂತೆ ಮಾಡುವುದು ಮತ್ತು ಅಲ್ಲಾಹನಿಗೆ ಸಲ್ಲಬೇಕಾದ ಎಲ್ಲ ಹಕ್ಕುಗಳನ್ನು ಸಲ್ಲಿಸುವಂತೆ ಮಾಡುವುದು ಎಂದು ಹೇಳಿರುವರು.

ಕಳೆದ ಕೆಲವು ದಿನಗಳಲ್ಲಿ ನಾನು ಸ್ಕಾಂಡಿನೇವಿಯನ್ ದೇಶಗಳನ್ನು ಸಂದರ್ಶಿಸುತ್ತಾ ಇದ್ದೆ. ಅಲ್ಲಿನ ಪತ್ರಿಕೆಗಳ ಜನರು ಮತ್ತು ವಿದ್ಯಾವಂತರಾದವರು ನನ್ನೊಂದಿಗೆ ಹೀಗೆ ಕೇಳಿದರು: ನಿಮ್ಮ ಉದ್ದೇಶಲಕ್ಷ್ಯಗಳೇನು? ಎಂದು. ನಾನು ಅವರೊಂದಿಗೆ ಹೇಳುತ್ತಾ ಇದ್ದೆ: ಅಹ್ಮದಿಯಾ ಖಿಲಾಫತ್ ಮತ್ತು ಅಹ್ಮದಿಯಾ ಜಮಾಅತ್‌ಗಳ ಉದ್ದೇಶಲಕ್ಷ್ಯಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಯಾವ ಉದ್ದೇಶಲಕ್ಷ್ಯಗಳಿಗೋಸ್ಕರ ಅಲ್ಲಾಹನು ಕಳುಹಿಸಿದ್ದನೋ ಆ ಉದ್ದೇಶಲಕ್ಷ್ಯಗಳೇ ಆಗಿವೆ. ಅದೇನೆಂದರೆ, ಮನುಷ್ಯನನ್ನು ಅಲ್ಲಾಹನಿಗೆ ಸಮೀಪವಾಗುವಂತೆ ಮಾಡಲು ಪೂರ್ಣ ಪ್ರಯತ್ನ ಮಾಡುವುದು ಮತ್ತು ಮಾನವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಅವರಿಗೆ ಸಲ್ಲಿಸುವುದು. ಇವುಗಳಿಗಿಂತ ಹೆಚ್ಚಿನ ಯಾವುದೇ ಉದ್ದೇಶಲಕ್ಷ್ಯ ನಮಗಿಲ್ಲ. ಏಕೆಂದರೆ ಈಗ ನಾವು ನೋಡುತ್ತಿದ್ದೇವೆ ಲೋಕವು ದೇವನನ್ನು ಮರೆತು ಬಿಡುತ್ತಾ ಇದೆ. ಸಾಮಾನ್ಯವಾಗಿ ಮಾನವ ಸೇವೆಯ ಹೆಸರಲ್ಲಿ ಸ್ವಾರ್ಥ ಲಾಭಗಳಿಸಲು ಪ್ರಯತ್ನ ನಡೆಸಲಾಗುತ್ತಿದೆ. ಅವುಗಳ ಕಾರಣದಿಂದ ಇನ್ನಷ್ಟು ಅಸಮಾದಾನ ತಲೆ ದೋರುತ್ತಿವೆ. ದೇಶಗಳ ಮತ್ತು ಜನಾಂಗಗಳ ಪರಸ್ಪರ ಸಂಬಂಧಗಳಲ್ಲಿ ಅಂತರ ಹೆಚ್ಚುತ್ತಾ ಹೋಗುತ್ತಿವೆ.

ನನ್ನ ಈ ವಿದೇಶ ಪ್ರಯಾಣದ ಕಾಲದಲ್ಲಿ ಅಲ್ಲಾಹನ ಅನುಗ್ರಹದಿಂದ ಮಾಧ್ಯಮಗಳ ಜನರೊಂದಿಗೆ ಸಹ ಸಾಕಷ್ಟು ಸಂದರ್ಶನಗಳು ಜರಗಿದುವು. ಮಾಲ್ಮೋ ಮಸ್‌ಜಿದ್ ಉದ್ಘಾಟನೆ ಸಂದರ್ಭದಲ್ಲಿಯೂ, ಡೆನ್‌ಮಾರ್ಕ್ ಮತ್ತು ಸ್ಟಾಕ್‌ಹೋಮ್‌ನಲ್ಲಿ ರಿಸೆಪ್ಷನ್‌ಗಳಲ್ಲೂ ಅನ್ಯರೊಂದಿಗೆ ಮಾತುಕತೆ ಸಹ ನಡೆಯಿತು. ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಸತ್ಯವಾದ ಉಪದೇಶಗಳು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಮಾದರಿ ಮತ್ತು ಖುಲಫಾವುರ್‍ರಾಶಿದೀನ್‌ಗಳ ಉದಾಹರಣೆ ನೀಡಿ ಮಾತನಾಡಲಾಯಿತು. ಬಹುತೇಕ ಜನರು ಸ್ಪಷ್ಟವಾಗಿ ಹೇಳಿದರು: ಇಂದು ನಮಗೆ ಇಸ್ಲಾಮಿನ ವಾಸ್ತವಿಕ ಉಪದೇಶಗಳ ಬಗ್ಗೆ ತಿಳಿಯಿತು ಎಂದು.

ಬಹುತೇಕ ಜನರು ಹೀಗೆ ಪ್ರಕಟಿಸಿದರು. ಇಸ್ಲಾಮಿನ ವಾಸ್ತವಿಕ ಉಪದೇಶಗಳೇನೆಂದು ಈಗ ನಮಗೆ ತಿಳಿಯಿತು. ಇಂದು ಅಹ್ಮದಿಯಾ ಜಮಾಅತಿನ ಖಲೀಫರಿಂದ ಇಸ್ಲಾಮಿನ ವಾಸ್ತವಿಕ ಉಪದೇಶಗಳೇನೆಂದು ನಾವು ತಿಳಿಯುವಂತಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಜಾರಿಗೊಂಡ ಅಹ್ಮದಿಯಾ ಖಿಲಾಫತ್, ಜಮಾಅತಿನವರಿಗೆ ಮಾರ್ಗದರ್ಶನ ನೀಡುತ್ತದೆಯಲ್ಲದೆ ಅನ್ಯರಿಗೆ ಎಂದರೆ ಇಸ್ಲಾಮ್ ಬಗ್ಗೆ ಭಯಪಡುವವರಿಗೆ ಸಹ ಸತ್ಯವಾದ ಇಸ್ಲಾಮೀ ಉಪದೇಶಗಳ ಉದಾಹರಣೆ ತೋರಿಸಿ ಕೊಡುತ್ತದೆ. ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅನ್ಯರ ಮೇಲೆ ಎಂತಹ ಪ್ರಭಾವ ಉಂಟಾಯಿತು ಎನ್ನುವುದರ ಬಗ್ಗೆ ಈಗ ನಾನು ಕೆಲವು ಉದಾಹರಣೆಗಳನ್ನು ನೀಡುತ್ತೇನೆ.

ಡೆನ್‌ಮಾರ್ಕ್‌ನ ಒಂದು ಹೋಟೆಲಿನಲ್ಲಿ ಒಂದು ರಿಸೆಪ್ಷನ್ ಇತ್ತು. ಸ್ಟೆನ್ ಹಾಫ್‌ಮೆನ್ ಎಂಬ ಹೆಸರಿನ ಒಬ್ಬ ಡ್ಯಾನಿಶ್ ಅತಿಥಿ ಹೀಗೆ ಹೇಳಿದರು: ಖಲೀಫರ ಭಾಷಣವನ್ನು ಆಲಿಸಿ ನನಗೆ ಬಹಳ ಹೆಚ್ಚು ಸಮಾದಾನವಾಯಿತು ಮತ್ತು ಸಂತೋಷವಾಯಿತು. ಇಂದಿನ ಕಾಲಘಟ್ಟದಲ್ಲಿ ಇಂತಹ ಸಂದೇಶಗಳ ಆವಶ್ಯಕತೆ ಅತ್ಯಂತ ಹೆಚ್ಚಾಗಿ ಇತ್ತು. ಖಲೀಫರ ಮಾತುಗಳು ಸ್ಕಾಂಡಿನೇವಿಯದಲ್ಲಿ ಬಹಳ ಉತ್ತಮವಾಗಿ ಜನರಿಗೆ ಮನವರಿಕೆಯಾಗುವಂತೆ ಅಲ್ಲಾಹನು ಮಾಡಲಿ ಎಂದು ಹೇಳಿದರು.

ಡೆನ್‌ಮಾರ್ಕ್ ದೇಶದ ನಾಕ್‌ಸ್ಕೋ ನಗರದ ಓರ್ವ ಕೌನ್ಸಿಲ್ ಸದಸ್ಯ ಹೇಳಿದರು: ಖಲೀಫರ ಭಾಷಣ ಬಹಳ ಪ್ರಭಾವಶಾಲಿಯಾಗಿತ್ತು. ಲಕ್ಷಾಂತರ ಮುಸ್ಲಿಮರು ನಿರ್ಭಯರಾಗಿ ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಒಂದು ಮಿನಾರದ ಹಾಗೆ

ನಿಂತುಕೊಂಡಿರುತ್ತಾರೆ. ಈ ಜನರು ಅಹ್ಮದಿಯಾ ಜಮಾಅತಿಗೆ ಸೇರಿದವರಾಗಿದ್ದಾರೆ ಎಂದು ತಿಳಿದು ನನಗೆ ಬಹಳ ಸಂತೋಷವಾಯಿತು.

ಡೆನ್‌ಮಾರ್ಕ್‌ನಲ್ಲಿ ವ್ಯಂಗ್ಯ ಚಿತ್ರಗಳ ಅಸ್ತಿಭಾರ ಹಾಕಲಾಗಿತ್ತು. ನಾನು ಅಲ್ಲಿನ ಜನರೊಂದಿಗೆ ಹೇಳಿದೆ: ಈ ವ್ಯಂಗ್ಯ ಚಿತ್ರಗಳಿಂದ ದ್ವೇಷ ಹುಟ್ಟುತ್ತದೆ ಮತ್ತು ಶಾಂತಿಗೆ ಭಂಗವುಂಟಾಗುತ್ತದೆ. ನಾಶ ಮತ್ತು ಧ್ವಂಸ ತಲೆದೋರುತ್ತದೆ. ವಿನಾಶದ ಹೊರತು ನಿಮಗೆ ಯಾವ ಲಾಭವೂ ಸಿಗಲಾರದು. ಅವರು ನನ್ನ ಮಾತುಗಳನ್ನು ಅಂಗೀಕರಿಸಿದರು. "ಈ ವಿಷಯದ ಬಗ್ಗೆ ನಮಗೆ ಬಹಳ ಆಸಕ್ತಿ ಇದೆ. ಈ ವ್ಯಂಗ್ಯ ಚಿತ್ರಗಳ ಬಗ್ಗೆ ಮಾತನಾಡಲು ಬಯಸುತ್ತೇವೆ. ಆದರೆ ನೀವು ಈ ವಿಷಯದ ಬಗ್ಗೆ ಮನವರಿಕೆ ಮಾಡಿಕೊಟ್ಟದ್ದು ನಮಗೆ ಬಹಳ ಚೆನ್ನಾಗಿ ಮನವರಿಕೆ ಆಯಿತು" ಎಂದು ಹೇಳಿದರು.

ಒಬ್ಬ ಅತಿಥಿ ಹೇಳಿದರು: ಇಂದಿನ ಭಾಷಣ ಆಲಿಸಿದ ನಂತರ ಮುಸ್ಲಿಮರ ಬಗ್ಗೆ ಜನರ ಭಾವನೆ ನಿಶ್ಚಯವಾಗಿಯೂ ಬದಲಾವಣೆ ಹೊಂದುವುದು. ನಾನು ಇಸ್ಲಾಮನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಲು ಪವಿತ್ರ ಖುರ್‌ಆನಿನ ಒಂದು ಪ್ರತಿಯನ್ನು ತರಿಸಿದ್ದೇನೆ. ಅದರಲ್ಲಿ ಟಿಪ್ಪಣಿಗಳು ಸಹ ಇವೆ. ಇಂದಿನ ಸಂಜೆಯ ನಂತರ ನನಗೆ ನನ್ನ ಅಲ್ಪಜ್ಞಾನದ ಬಗ್ಗೆ ತಿಳಿಯಿತು. ನಾನು ಪವಿತ್ರ ಖುರ್‌ಆನನ್ನು ಓದುವೆನು.

ನಾಕ್‌ಸ್ಕೋ ನಗರದ ಒಬ್ಬ ಅತಿಥಿ ಹೀಗೆ ಬರೆದರು: ನಾವು ತಮಗೆ ಸಾವಿರಾರು ಸಲ ಕೃತಜ್ಞತೆ ಅರ್ಪಿಸುತ್ತೇವೆ. ಈ ಸಭೆ ನನ್ನ ಜೀವಿತದಾದ್ಯಂತ ಒಂದು ಸ್ಮಾರಕ ಕ್ಷಣವಾಗಿ ಯಾವಾಗಲೂ ನೆನಪಿನಲ್ಲಿರುವುದು. ಒಂದು ಉತ್ತಮ ಅನುಭವ ರೂಪದಲ್ಲಿ ನೆನಪಿನಲ್ಲಿರುವುದು. ಕೋಪನ್ ಹೇಗನ್‌ನಿಂದ ನಾಕ್‌ಸ್ಕೋ ತನಕ ಪ್ರಯಾಣಿಸುವಾಗ ನಮ್ಮ ರೈಲುಬಂಡಿ ಬೋಗಿಯಲ್ಲಿ ಒಂದು ವಿಶಿಷ್ಟ ವಾತಾವರಣವಿತ್ತು. ನಮ್ಮ ಪ್ರಯಾಣದಲ್ಲಿ ಈ ಸಭೆಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಪ್ರತಿಯೊಬ್ಬರೂ "ನಾವು ಬಹಳ ಒಳ್ಳೆಯ ದಿನವನ್ನು ಅನುಭವಿಸಿದೆವು. ನಮಗೆ ಕಲಿಯಲು ಬಹಳ ದೊರಕಿತು" ಎಂದು ಒಮ್ಮತದಿಂದ ಸೂಚಿಸುತ್ತಿದ್ದರು.

ಒಬ್ಬ ಪತ್ರಕರ್ತ ತನ್ನ ಭಾವನೆಗಳನ್ನು ಹೀಗೆ ಸೂಚಿಸಿದರು: ಬಹಳ ವಿಷಯ ಕಲಿತೆನು. ಖಲೀಫರ ಭಾಷಣವು ನನ್ನನ್ನು ಚಿಂತಿಸುವಂತೆ ನಿರ್ಬಂಧಿಸಿತು. ಮಾಧ್ಯಮಗಳು ಇಸ್ಲಾಮಿನ ಬಗ್ಗೆ ನೀಡುವ ಚಿತ್ರ ವಾಸ್ತವಿಕತೆಯಿಂದ ಬಹಳ ದೂರವಿದೆ ಎಂದು ತಿಳಿಯಿತು. ಖಲೀಫರ ಭಾಷಣ ಪ್ರೀತಿ, ಪರಸ್ಪರ ಗೌರವ ನೀಡುವಿಕೆ ಬಗ್ಗೆಯಾಗಿತ್ತು. ಇವುಗಳೇ ಶಾಂತಿ ಸ್ಥಾಪನೆಯ ಕೀಲಿಗೈಗಳೆಂದು ಅವರು ಹೇಳಿದರು.

ಒಬ್ಬ ಡ್ಯಾನಿಶ್ ಮಹಿಳೆ ಹೇಳಿದರು: ಮೊದಲು ನಾನು ಇಸ್ಲಾಮ್ ಬಗ್ಗೆ ಕೆಟ್ಟ ಮಾತುಗಳನ್ನು ಆಲಿಸುತ್ತಿದ್ದೆ. ಈ ದಿನ ನಾನು ಆಲಿಸಿದುದು ಪ್ರೀತಿ ತುಂಬಿದ ಸಂದೇಶವನ್ನಾಗಿದೆ. ಐಸೀಸ್ ಇಸ್ಲಾಮ್ ಅಲ್ಲ ಎಂದು ನನಗೆ ತಿಳಿಯಿತು. ಎಲ್ಲ ಧರ್ಮಗಳ ಆರಾಧನಾಲಯಗಳನ್ನು ಸಂರಕ್ಷಿಸಬೇಕು ಎನ್ನುವುದು ಇಸ್ಲಾಮ್ ಧರ್ಮದ ಉಪದೇಶವಾಗಿದೆ. ಇನ್ನೊಬ್ಬ ಡ್ಯಾನಿಶ್ ಮಹಿಳೆ ಹೇಳಿದರು: ನಾನು ಈ ದಿನ ಎಂತಹ ಒಬ್ಬರನ್ನು ಕಂಡೆನೆಂದರೆ ಅವರು ಸಾಬೀತುಗೊಳಿಸಿದರು ಮಾಧ್ಯಮಗಳ ಮೂಲಕ ತೋರಿಸಲ್ಪಡುವ ಇಸ್ಲಾಮಿನ ಚಿತ್ರ ತಪ್ಪಾಗಿದೆ ಎಂದು. ನಾನು ಬಹಳ ಭಾವೋದ್ವೇಗ ಭರಿತಳಾಗಿದ್ದೇನೆ ಮತ್ತು ಉತ್ಸಾಹ ಭರಿತೆಯಾಗಿದ್ದೇನೆ. ನಾನು ಎಂತಹ ಒಬ್ಬರನ್ನು ಭೇಟಿಯಾದೆ ಎಂದರೆ, ಜಿಹಾದ್ ಎಂದರೇನೆಂದು ಅವರು ನನಗೆ ಮನವರಿಕೆ ಮಾಡಿಕೊಟ್ಟರು. ಮಾಧ್ಯಮಗಳ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಲೋಕದ ಶಾಂತಿಯನ್ನು ಸಮತೋಲನದಲ್ಲಿ ಇರಿಸಲು ಖಲೀಫರು ಹೇಳಿದ ಮಾತುಗಳು ನನಗೆ ಬಹಳ ಉತ್ತಮವಾಗಿ ತೋರಿತು.

ಒಬ್ಬ ಡ್ಯಾನಿಶ್ ಅತಿಥಿ ಹೇಳಿದರು: ಖಲೀಫರು ತಮ್ಮ ಭಾಷಣದಲ್ಲಿ ಪವಿತ್ರ ಖುರ್‌ಆನಿನ ಉಲ್ಲೇಖಗಳನ್ನು ನೀಡಿದರು. ಆದುದರಿಂದ ಅವರ ಮಾತುಗಳು ಅವರು ಸ್ವತಃ ಸೃಜಿಸಿದವುಗಳಲ್ಲ, ಅವು ವಾಸ್ತವಿಕ ಉಪದೇಶಗಳಾಗಿವೆ ಎಂದು ತಿಳಿಯಿತು. ಸತ್ಯವೇನೆಂದರೆ ಡ್ಯಾನಿಶ್ ಜನರು ಮುಸ್ಲಿಮರ ಬಗ್ಗೆ ಮತ್ತು ಮಧ್ಯ ಪೂರ್ವದಲ್ಲಿ ನಡೆಯುತ್ತಿರುವ ಯುದ್ಧಗಳ ಬಗ್ಗೆ ಬಹಳ ಭಯಭೀತರಾಗಿದ್ದಾರೆ. ಈ ದಿನ ನಮಗೆ ತಿಳಿಯಿತು, ಅಲ್ಲಿ ಸಂಭವಿಸುತ್ತಾ ಇರುವುದು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಥವಾ ಅವರ ಧರ್ಮದ ತಪ್ಪುಗಳ ಕಾರಣದಿಂದಲ್ಲ, ಅವರ ಉಪದೇಶಗಳನ್ನು ಬಿಗಡಾಯಿಸಿದ ಕಾರಣದಿಂದಾಗಿದೆ.

ಯುನಿವರ್ಸಿಟಿಯ ಒಬ್ಬ ವಿದ್ಯಾರ್ಥಿ ಹೇಳಿದರು: ಇಸ್ಲಾಮ್ ಒಂದು ಶಾಂತಿಪ್ರಿಯ ಧರ್ಮವೆಂದು ಪವಿತ್ರ ಖುರ್‌ಆನಿನ ವಚನಗಳ ಮೂಲಕ ನನಗೆ ಮತ್ತು ಅಲ್ಲಿ ಇದ್ದವರಿಗೆ ಸಾಬೀತುಪಡಿಸಿ ಕೊಡಲಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಖಲೀಫರ ಜೀವಿತದ ಉದಾಹರಣೆ ಮೂಲಕ ಸಹ ಇದನ್ನು ಸಾಬೀತುಗೊಳಿಸಲಾಯಿತು. ನನಗೆ ಇದು ಬಹಳ ಇಷ್ಟವಾಯಿತು. ಅಹ್ಮದಿಯಾ ಜಮಾಅತಿನ ಉದ್ದೇಶಲಕ್ಷ್ಯಗಳ ಬಗ್ಗೆ ಸ್ಪಷ್ಟಪಡಿಸಿದುದರಿಂದ ನನಗೆ ಇಸ್ಲಾಮನ್ನು ಮನವರಿಕೆ ಮಾಡಲು ಸಂದರ್ಭ ಲಭಿಸಿತು.

ಇನ್ನೊಬ್ಬ ಅತಿಥಿ ಹೇಳಿದರು: ನಮ್ಮ ವಂಶ ಮತ್ತು ಈ ಕಾಲದ ಸಮಸ್ಯೆಗಳ ಬಗ್ಗೆ ಮತ್ತು ಪವಿತ್ರ ಖುರ್‌ಆನ್ ಮೂಲಕ ಸಮಸ್ಯೆಗಳಿಗೆ ಅವರು ಸೂಚಿಸಿದ ಪರಿಹಾರ ಮಾರ್ಗಗಳು ಬಹಳ ಉನ್ನತಮಟ್ಟದವುಗಳಾಗಿವೆ. ಪವಿತ್ರ ಖುರ್‌ಆನ್ ನ್ಯಾಯಪಾಲನೆ ಬಗ್ಗೆ ಇಷ್ಟೆಲ್ಲಾ ಹೇಳಿದೆ ಎನ್ನುವುದರ ಬಗ್ಗೆ ನನಗೆ ತಿಳಿದಿರಲಿಲ್ಲ. ಇಸ್ಲಾಮಿನ ಬಗ್ಗೆ ನನ್ನ ನಿಲುವು ಸಂಪೂರ್ಣವಾಗಿ ಬದಲಾವಣೆ ಹೊಂದಿದೆ. ಮಾಧ್ಯಮಗಳು ಇಸ್ಲಾಮ್ ಬಗ್ಗೆ ಏನು ಹೇಳುತ್ತಿದೆಯೋ ಅದು ಮಾತ್ರ ನನಗೆ ತಿಳಿದಿತ್ತು. ಇಸ್ಲಾಮಿನ ಪ್ರಥಮ ಕಾಲಘಟ್ಟದ ಮುಸ್ಲಿಮರು ಕ್ರೈಸ್ತರೊಂದಿಗೂ ಯಹೂದಿಯರೊಂದಿಗೂ ಪ್ರೀತಿಯಿಂದ ವರ್ತಿಸುತ್ತಿದ್ದರೆಂದು ತಿಳಿದು ನನಗೆ ಇಷ್ಟವಾಯಿತು. ಖಲೀಫರ ಮಾತುಗಳು ನನ್ನ ಮೇಲೆ ಗಾಢ ಪ್ರಭಾವ ಬೀರಿದುವು.

ಹ್ಯುಮನಿಸ್ಟ್ ಸೊಸೈಟಿಯೊಂದಿಗೆ ಸಂಬಂಧ ಹೊಂದಿದ ಒಬ್ಬ ಮಹಿಳೆ ಹೇಳಿದರು: ಶಾಂತಿ ಸ್ಥಾಪನೆಯ ಕುರಿತು ಜನರಲ್ಲಿ ಬಹಳ ಕಡಿಮೆ ತಿಳುವಳಿಕೆ ಇದೆ. ಮಾಧ್ಯಮಗಳು ಕೇವಲ ಕೆಟ್ಟ ಸಂಗತಿಗಳನ್ನು ಪ್ರಕಟಿಸುತ್ತಾರೆ. ಒಳಿತಿನ ಬಗ್ಗೆ ಅವರು ಏನೂ ಪ್ರತಿಪಾದಿಸುವುದಿಲ್ಲ. ಈ ದಿನ ಡೆನ್ಮಾರ್ಕಿನ ಎಲ್ಲ ಮಾಧ್ಯಮ ವರ್ಗದವರೂ ಇಲ್ಲಿ ಹಾಜರಿರಬೇಕಾಗಿತ್ತು. ನಮ್ಮ ರಾಜ್ಯದ ಜನರ ಈ ಭಾವನೆಯ ಬಗ್ಗೆ ನನಗೆ ತುಂಬಾ ನಿರಾಶೆಯಿದೆ ಎಂದು ಹೇಳಿದರು. ಇನ್ನೊಬ್ಬ ಡ್ಯಾನಿಶ್ ಮಹಿಳೆ ಹೇಳಿದರು: ನನಗೆ

ಇಸ್ಲಾಮ್ ಬಗ್ಗೆ ಏನೂ ತಿಳಿದಿರಲಿಲ್ಲ. ಈ ದಿನ ನಾನು ಬಹಳ ಕಲಿತೆನು. ಈ ಕಾರಣದಿಂದ ಖಲೀಫರು ನನ್ನ ಅಧ್ಯಾಪಕರಾಗಿದ್ದಾರೆ ಎನ್ನುವುದರ ಬಗ್ಗೆ ನಾನು ಸಂತೋಷಗೊಂಡಿದ್ದೇನೆ. ಖಲೀಫರ ಈ ಸಂದೇಶವನ್ನು ಡೆನ್‌ಮಾರ್ಕ್ ದೇಶದಲ್ಲಿಡೀ ಹಬ್ಬಿಸಬೇಕಾಗಿದೆ. ನಾವು ಅವರ ಸಂದೇಶವನ್ನು ಅಂಗೀಕರಿಸಬೇಕು. ಮತ್ತು ಅವರಿಂದ ಕಲಿತುಕೊಳ್ಳಬೇಕು. ಎಲ್ಲ ಮುಸ್ಲಿಮರು ಭೀಕರವಾದಿಗಳೆಂದು ನಾನು ಭಾವಿಸುತ್ತಿದ್ದೆ. ಆದರೆ ಇಂತಹ ಭಾವನೆ ನಾನು ಹೊಂದಿದ ಬಗ್ಗೆ ನಾನು ಈಗ ನಾಚಿಕೆ ಪಡುತ್ತೇನೆ.

ಒಬ್ಬ ಡ್ಯಾನಿಶ್ ರಾಜಕಾರಣಿ ಕೆಮ್ ಲೋಫಸ್ ಹೋಮ್ ಹೇಳಿದರು: ಇಸ್ಲಾಮ್ ಎಲ್ಲ ಧರ್ಮಗಳಿಗೆ ಸ್ವಾತಂತ್ರ್ಯ ನೀಡುತ್ತದೆ ಎಂದು ನಿಮ್ಮ ಖಲೀಫ ಸ್ಪಷ್ಟವಾಗಿ ಹೇಳುತ್ತಾರೆ. ಖಲೀಫರ ಧ್ವನಿ ಲೋಕವು ಆಲಿಸುವ ಆವಶ್ಯಕತೆ ಇದೆ. ಅವರ ಮಾತುಗಳನ್ನು ದೂರ ದೂರದ ತನಕ ಹಬ್ಬಿಸಬೇಕಾದುದು ಆವಶ್ಯಕವಾಗಿದೆ. ಪ್ರಾಯಶಃ ನೀವು ಚಿಕ್ಕದಾದೊಂದು ಜಮಾಅತ್ ಆಗಿರಬಹುದು. ಆದರೆ ನಿಮ್ಮ ಸಂದೇಶ ಬಹಳ ದೊಡ್ಡದಾಗಿದೆ.

ಅಧ್ಯಾಪಕರಾದ ಒಬ್ಬ ಡ್ಯಾನಿಶ್ ಅತಿಥಿ, ಹೇಳುತ್ತಾರೆ: ನಾನು ಇಸ್ಲಾಮ್ ಬಗ್ಗೆ ಬಹಳ ಕಲಿತುಕೊಂಡೆನು. ನಾನು ನನ್ನ ವಿದ್ಯಾರ್ಥಿಗಳಿಗೆ ನಿಮ್ಮ ಖಲೀಫರು ಹೇಳಿದವುಗಳನ್ನು ಹೇಳಿ ಕೊಡುವೆನು. ನಾವು ಇಸ್ಲಾಮಿನಿಂದಲ್ಲ ಭೀಕರ ಕೃತ್ಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಇಸ್ಲಾಮ್ ಮತ್ತು ಭೀಕರವಾದ ಬೇರೆ ಬೇರೆಯಾಗಿದೆ.

ಮಾಲ್ಮೋ ನಗರದಲ್ಲಿ ಮಸ್‌ಜಿದ್ ಉದ್ಘಾಟನೆಯ ಸಂದರ್ಭದಲ್ಲಿ 140ಕ್ಕಿಂತ ಹೆಚ್ಚು ಸ್ವೀಡಿಶ್ ಅತಿಥಿಗಳು ಭಾಗವಹಿಸಿದ್ದರು. ಪಾರ್ಲಿಮೆಂಟ್ ಸದಸ್ಯರು, ಮಾಲ್ಮೋ ನಗರದ ಮೇಯರ್, ಪೋಲೀಸ್ ಮುಖ್ಯಾಧಿಕಾರಿ, ಸಿಟಿ ಚರ್ಚಿನ ಪ್ರತಿನಿಧಿ, ಯುನಿವರ್ಸಿಟಿಗಳ ಪ್ರೊಫೆಸರ್‌ಗಳು ಮತ್ತು ವಿವಿಧ ವಿಭಾಗಗಳ ಜನರು ಭಾಗವಹಿಸಿದರು.

ಒಬ್ಬ ಯಹೂದಿ ಅತಿಥಿ ಹೇಳಿದರು: ಇಂದಿನ ಈ ದಿನ ನನಗೆ ಬಹಳ ಜ್ಞಾನವರ್ಧಕವಾದ ದಿನವಾಗಿತ್ತು. ನಾನು ಇಸ್ಲಾಮ್ ಬಗ್ಗೆ ಬಹಳ ಕಲಿತೆನು. ಒಬ್ಬ ಮುಸ್ಲಿಮ್ ನಾಯಕನಿಂದ ಕೇವಲ ಪ್ರೀತಿಯ ಸಂದೇಶ ಆಲಿಸಿ ನಾನು ಆಶ್ಚರ್ಯಚಕಿತನಾದೆನು. ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಓರ್ವ ಕ್ರೈಸ್ತ ಸನ್ಯಾಸಿನಿ ಹೇಳಿದರು: ಖಲೀಫರ ಮಾತುಗಳು ನನ್ನನ್ನು ಅಲುಗಾಡಿಸಿವೆ. ನಾನು ಬಹಳ ಭಾವೋದ್ವೇಗಭರಿತೆಯಾಗಿರುವೆ. ಒಬ್ಬ ಮುಸ್ಲಿಮ್ ನಾಯಕ ಕೇವಲ ಶಾಂತಿಯ ಬಗ್ಗೆ ಮಾತನಾಡುವುದನ್ನು ನಾನು ಆಲಿಸಿದೆ. ಇಸ್ಲಾಮ್ ಮಾನವರ ಸೇವೆ ಮಾಡುವ ಧರ್ಮ ಎಂದು ಅವರು ಹೇಳಿದರು. ಅವರ ಭಾಷಣದ ಅತ್ಯುತ್ತಮ ಭಾಗ ಇದಾಗಿದೆ. ಮಾನವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಬೇಕೆಂದು ಅವರು ಹೇಳಿದರು. ದೇವನ ಬಗ್ಗೆ ದೃಢವಿಶ್ವಾಸ ಹೊಂದಬೇಕೆಂದೂ ಅವರು ಹೇಳಿದ್ದಾರೆ. ನನ್ನ ಅಭಿಪ್ರಾಯ ಸಹ ಇದೇ ಆಗಿದೆ ಎಂದು ಹೇಳಿದರು. ಮಾಲ್ಮೋ ನಗರದ ಮೇಯರ್ ಆಂಡರ್‌ಸನ್ ಹೇಳಿದರು: ಈ ಮಸ್‌ಜಿದನ್ನು ನಾವು ಶಾಂತಿ ಸ್ಥಾಪನೆ ಮತ್ತು ಭಾವೈಕ್ಯದ ಮಾರ್ಗ ಎಂದು ಭಾವಿಸುತ್ತೇವೆ. ಒಬ್ಬ ಪತ್ರಕರ್ತ ಹೇಳಿದರು: ಈ ಮಸ್‌ಜಿದನ್ನು ಇಲ್ಲಿನ ಜಮಾಅತಿನ ಜನರು ತಮ್ಮ ಸ್ವಂತ ಹಣ ಖರ್ಚು ಮಾಡಿ ನಿರ್ಮಿಸಿದರೆಂಬುದು ಆಶ್ಚರ್ಯಕರವಾಗಿದೆ. ಇದು ಸಾಮಾನ್ಯ ಸಂಖ್ಯೆಯ ಹಣವೇನೂ ಅಲ್ಲ. ಮೂರು ಮಿಲಿಯನ್ ಕ್ರೋನರ್ ಖರ್ಚು ಮಾಡಲಾಗಿದೆ.

ಮಾಲ್ಮೋ ಯುನಿವರ್ಸಿಟಿಯಲ್ಲಿ ಕಲಿಸುವ ಒಬ್ಬ ಅತಿಥಿ ಹೇಳಿದರು: ಖಲೀಫರ ಭಾಷಣ ಬಹಳ ಪ್ರಭಾವಶಾಲಿಯಾಗಿತ್ತು. ಶಾಂತಿ, ಪ್ರೀತಿ ಮತ್ತು ಸೌಹಾರ್ದದ ಬಗ್ಗೆ ಅತ್ಯಂತ ಸ್ಪಷ್ಟ ಜಾಗತಿಕ ಸಂದೇಶ ನಮಗೆ ಅವರು ನೀಡಿದರು. ಮಾಲ್ಮೋ ಯುನಿವರ್ಸಿಟಿಯ ಇಸ್ಲಾಮೀ ವಿಭಾಗದ ಪ್ರೊಫೆಸರ್ ಸಹ ಆಗಮಿಸಿದ್ದರು. ಅವರು ಹೇಳಿದರು: ಖಲೀಫರ ಭಾಷಣ ಅತ್ಯಂತ ಆಸಕ್ತಿದಾಯಕವಾಗಿತ್ತು ಮತ್ತು ಪ್ರಭಾವಶಾಲಿಯಾಗಿತ್ತು.

ಸ್ವೀಡಿಶ್ ಸಂಸ್ಥೆಯಾದ ಚರ್ಚ್ ಆಫ್ ಸೆಂಟಾಲೋಜಿಯ ಸಮಾಚಾರ ವಿಭಾಗದ ಮುಖ್ಯಸ್ಥ ಸಭೆಗೆ ಆಗಮಿಸಿದ್ದರು. ಅವರು ಹೇಳಿದರು: ಖಲೀಫರು ಹೇಳಿದ ಒಂದು ವಾಕ್ಯ ನನಗೆ ಬಹಳ ಮೆಚ್ಚಿಗೆಯಾಯಿತು. ಅದೇನೆಂದರೆ, ದೊಡ್ಡ ಸಾಮಾಜಿಕ ಲಾಭಕ್ಕೋಸ್ಕರ ನಾವು ನಮ್ಮ ಕೆಲವು ವೈಯಕ್ತಿಕ ಹಿತಾಸಕ್ತಿಗಳನ್ನು ತ್ಯಜಿಸಬೇಕಾಗಬಹುದು ಎಂಬುದು.

ಮೈಕಲ್ ಎಂಬ ಓರ್ವ ವ್ಯಕ್ತಿ, ಅವರ ತಂದೆ ತಾಯಿ ಪೋಲೆಂಡ್‌ನವರಾಗಿದ್ದಾರೆ. ಅವರು ಈಗ ಸ್ವೀಡನ್‌ನಲ್ಲಿ ನೆಲೆಸಿರುವರು. ಅವರು ಹೇಳಿದರು: ಭಾಷಣ ಪ್ರತಿಯೊಂದು ರೀತಿಯಲ್ಲಿಯೂ ಪರಿಪೂರ್ಣವಾಗಿತ್ತು. ಅದರಲ್ಲಿ ಶಾಂತಿ ಮತ್ತು ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡುವ ಸಂದೇಶವಿದೆ. ಅವರು ಹೇಳಿದರು: ನಾನು ದೇವನ ಅಸ್ತಿತ್ವವನ್ನು ನಂಬುತ್ತೇನೆ. ಆದರೆ ಇಲ್ಲಿ ವಾಸಿಸುವ ಇತರ ಜನರಲ್ಲಿ ಬಹುತೇಕ ಮಂದಿ ಈ ವಿಶ್ವಾಸವನ್ನು ಹೊಂದಿಲ್ಲ. ಆದುದರಿಂದ ದೇವನ ಬಗ್ಗೆ ಮತ್ತು ಸೃಷ್ಟಿಕರ್ತನ ಬಗ್ಗೆ ದೃಢವಿಶಾಸ ಹೊಂದಿರುವ ಒಬ್ಬರು ಸೀಡನ್‌ಗೆ ಆಗಮಿಸಿದ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ.

ಒಬ್ಬ ಸ್ವೀಡಿಶ್ ಅತಿಥಿ ತನ್ನ ಅಭಿಪ್ರಾಯ ಸೂಚಿಸುತ್ತಾ ಹೇಳಿದರು: ಈ ಸಾಯಂಕಾಲ ನನ್ನ ಮೇಲೆ ಅಪರಿಮಿತ ಪ್ರಭಾವ ಬೀರಿದೆ ಮತ್ತು ಇಸ್ಲಾಮ್ ಏನೆಂದು ನಾನು ಕಲಿತು ಕೊಂಡೆನು. ಖಲೀಫರು ಕೆಲವು ನಿಮಿಷಗಳಲ್ಲಿ ಅನೇಕ ವಿಷಯಗಳ ಬಗ್ಗೆ ಮಾತನಾಡಿದರು. ಅವರು ಇಸ್ಲಾಮ್ ಪರವಾಗಿ ಹೇಗೆ ಪ್ರತಿಪಾದಿಸಿದರೆಂದರೆ ಇದರ ಮೊದಲು ಅಂತಹ ಮಾತು ನಾನು ಎಂದೂ ಆಲಿಸಿರಲಿಲ್ಲ. ಒಬ್ಬ ಕ್ರೈಸ್ತ ಪಾದರಿ ಹೇಳಿದರು: ನಿಮ್ಮ ಖಲೀಫರ ಭಾಷಣದ ಪ್ರತಿಯೊಂದು ಶಬ್ದದ ಬಗ್ಗೆ ನಾನು ಒಮ್ಮತ ಹೊಂದಿದ್ದೇನೆ. ದೇವನನ್ನು ನಾವು ನೆನಪಿನಲ್ಲಿಡಬೇಕೆಂಬ ಅವರ ಮಾತು ನನಗೆ ಮೆಚ್ಚಿಗೆಯಾಯಿತು. ಇದು ಧರ್ಮದ ಅಸ್ತಿಭಾರವಾಗಿದೆ. ಖಲೀಫರು ತನ್ನ ಭಾಷಣದ ಆರಂಭದಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಪಠಿಸಿದಾಗ ಅದು ಬಹಳ ಆಧ್ಯಾತ್ಮಿಕವೂ ಕಂಪನಗೊಳಿಸುವಂತಹದೂ ಆಗಿ ಭಾಸವಾಯಿತು.

ಈ ರೀತಿಯ ಅನೇಕ ಅಭಿಪ್ರಾಯಗಳನ್ನು ಅತಿಥಿಗಳು ಪ್ರಕಟಿಸಿದ್ದಾರೆ. ಬೌದ್ಧ ಮತದವರೂ ಕ್ರೈಸ್ತರೂ ಇವರಲ್ಲಿ ಸೇರಿದ್ದಾರೆ. ಅವರೆಲ್ಲರೂ, ಇಸ್ಲಾಮಿನ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳು ಖಂಡಿತವಾಗಿಯೂ ತೀವ್ರವಾದಕ್ಕೆ ವಿರುದ್ಧವಾಗಿವೆ ಎಂಬ ಅಭಿಪ್ರಾಯ ಪ್ರಕಟಪಡಿಸಿದರು. ಪಾರ್ಲಿಮೆಂಟಿನ ಒಬ್ಬ ಸದಸ್ಯರು ಹೇಳಿದರು: ಪ್ರತಿಯೊಂದು ಸ್ಥಳದಲ್ಲಿಯೂ ಪ್ರತಿಯೊಂದು ವೇದಿಕೆಯಲ್ಲಿಯೂ

ಖಲೀಫರು ಇಸ್ಲಾಮಿನ ಪ್ರತಿನಿಧಿಯಾಗಬೇಕು. ಜನರು ಅವರ ಮಾತುಗಳನ್ನು ಆಲಿಸಬೇಕು. ಯಾರಿಗಾದರೂ ಇಸ್ಲಾಮ್ ಬಗ್ಗೆ ಏನಾದರೂ ಭಯವಿದ್ದಲ್ಲಿ ಅದು ಇಂದು ದೂರ ಸರಿದಿರಬಹುದು.

ಅಲ್ಲಾಹನ ಅನುಗ್ರಹದಿಂದ ರೇಡಿಯೋ, ಟೆಲಿವಿಶನ್ ಮತ್ತು ಪತ್ರಿಕೆಗಳ ಮುಖಾಂತರ ಲಕ್ಷಗಟ್ಟಲೆ ಜನರಿಗೆ ಇಸ್ಲಾಮಿನ ವಾಸ್ತವಿಕ ಸಂದೇಶ ತಲಪಿತು. ನಾವು ನಮ್ಮ ಸಂಪನ್ಮೂಲಗಳನ್ನು ನೋಡುವುದಾದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಇಸ್ಲಾಮಿನ ಸಂದೇಶ ತಲಪಿಸುವ ಕಲ್ಪನೆ ಸಹ ನಾವು ಮಾಡಲಾರೆವು. ಆದರೆ ಅಲ್ಲಾಹನ ವಿಧಿನಿರ್ಣಯ ಈ ಸಂದೇಶ ಲೋಕದ ಅಂಚುಗಳ ತನಕ ತಲಪಿಸಬೇಕು ಎಂದು ತೀರ್ಮಾನಿಸಿರುವಾಗ ಈ ಅಭಿವೃದ್ಧಿಗಳನ್ನು ತಡೆಗಟ್ಟಬಲ್ಲವನು ಯಾರು? ಯಾವುದೇ ಲೌಕಿಕ ಶಕ್ತಿ ಅದನ್ನು ತಡೆಗಟ್ಟಲಾರದು. ನಾವು ಅಲ್ಲಾಹನೊಂದಿಗೆ ಹೀಗೆ ಪ್ರಾರ್ಥಿಸಬೇಕು. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ನಿಷ್ಠೆಯೊಂದಿಗೆ ಖಿಲಾಫತ್‌ನೊಂದಿಗೆ ಜೋಡಿಸಿಡಲಿ. ಅಲ್ಲಾಹನ ವಾಗ್ದಾನಗಳು ಇನ್ನಷ್ಟು ಹೆಚ್ಚು ವೈಭವದೊಂದಿಗೆ ಬೇಗನೆ ಈಡೇರುವುದನ್ನು ನಾವು ನೋಡುವಂತಾಗಲಿ – ಆಮೀನ್.

——————————*****——————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 27-05-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon